


ಕೆರೀಬಿಯನ್ ದ್ವೀಪಸಮೂಹದ ವಿಶ್ವಕಪ್ ಅಂಚೆಚೀಟಿಗಳು (1976)




ಸೇಂಟ್ ವಿನ್ಸೆಂಟ್‌ನ ಲಕೋಟೆಯಲ್ಲಿ ಸಚಿನ್ (2011)




ಅಂಚೆಚೀಟಿಯಲ್ಲಿ ಭಾರತದ ದಿಗ್ಗಜ ಆಟಗಾರರು




ಶ್ರೀಲಂಕಾ 1996ರಲ್ಲಿ ಚಾಂಪಿಯನ್ ಆದ ನೆನಪಿನಲ್ಲಿ ಬಿಡುಗಡೆಗೊಳಿಸಿದ ಮಿನಿಯೇಚರ್ ಶೀಟ್




ಬಾಂಗ್ಲಾದೇಶ 2007ರ ವಿಶ್ವಕಪ್ ವೇಳೆ ಹೊರತಂದ ಅಂಚೆಚೀಟಿಗಳು

ವರ್ಷ (1996) ಮೂರು ಅಂಚೆ ಚೀಟಿಗಳನ್ನು ಹೊರತಂದಿತು.

1999ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ ವಿಶ್ವಕಪ್ ವೇಳೆ ಅಫ್ಘಾನಿಸ್ತಾನ ಐದು ಅಂಚೆಚೀಟಿಗಳನ್ನು ಹೊರತಂದಿತ್ತು. ಆ ದೇಶದಲ್ಲೂ ಕ್ರಿಕೆಟ್ ನೆಲೆ ಪಡೆದುಕೊಳ್ಳುತ್ತಿದ್ದುದರ ಸಂಕೇತವಾಗಿತ್ತು ಈ ಹೆಜ್ಜೆ. ಆಯ್ದ ಕ್ರಿಕೆಟ್ ಆಟಗಾರರ ಚಿತ್ರಗಳನ್ನು ಇವು ಹೊಂದಿದ್ದವು.

ಬಾಂಗ್ಲಾದೇಶವೂ ಎರಡು ಅಂಚೆಚೀಟಿಗಳನ್ನು ಹೊರತಂದಿತು. ಒಂದರಲ್ಲಿ ಆ ದೇಶದ ಕ್ರಿಕೆಟ್ ಮಂಡಳಿ ಲಾಂಛನ ಮತ್ತು ಧ್ವಜದ ಚಿತ್ರ ಇತ್ತು. ಇನ್ನೊಂದರಲ್ಲಿ ಭಾಗವಹಿಸಿದ ದೇಶಗಳ ಕ್ರಿಕೆಟ್ ಮಂಡಳಿಯ ಲಾಂಛನಗಳಿದ್ದವು.

2007ರಲ್ಲಿ ಶ್ರೀಲಂಕಾ ದೇಶವು ಎರಡು ವಿಶೇಷ ಅಂಚೆಚೀಟಿಗಳನ್ನು ವಿಶ್ವಕಪ್ ಸಂದರ್ಭದಲ್ಲಿ ಬಿಡುಗಡೆ ಮಾಡಿತು. ಎರಡೂ ಅಂಚೆಚೀಟಿಗಳಲ್ಲಿ ಚಿತ್ರಗಳ ಜೊತೆಗೆ ಭಾಗವಹಿಸುವ ದೇಶಗಳ ಧ್ವಜಗಳ ಸಾಲು ಇತ್ತು. ಬಾಂಗ್ಲಾದೇಶವೂ ಈ ವಿಶ್ವಕಪ್ ಸಂದರ್ಭದಲ್ಲಿ ನಾಲ್ಕು ಆಕರ್ಷಕ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿದ್ದು ಗಮನಾರ್ಹ.

## ಎಲ್ಲ ದೇಶಗಳಿಗೆ ಗೌರವ

2011ರ ವಿಶ್ವಕಪ್‌ಗೆ ಮೊದಲು ಕೆರೀಬಿಯನ್ ದ್ವೀಪ ಸಮೂಹದ ಸೇಂಟ್ ವಿನ್ಸೆಂಟ್ ದೇಶ, ಟೂರ್ನಿಯಲ್ಲಿ ಆಡುವ ಪ್ರತಿಯೊಂದು ರಾಷ್ಟ್ರಗಳಿಗೆ ಸಂಬಂಧಿಸಿ ನಾಲ್ಕು ಅಂಚೆಚೀಟಿಗಳಿರುವ ವಿಶೇಷ ಲಕೋಟೆಗಳನ್ನು ಬಿಡುಗಡೆ ಮಾಡಿತು. ಇದರಲ್ಲಿ ಭಾರತಕ್ಕೆ ಸಂಬಂಧಿಸಿದ ಲಕೋಟೆಯಲ್ಲಿ ಸಚಿನ್ ತೆಂಡೂಲ್ಕರ್ ಅವರ ಮೂರು ಅಂಚೆಚೀಟಿಗಳಿದ್ದವು. ನ್ಯೂಜಿಲೆಂಡ್ ಕವರ್‌ನಲ್ಲಿ ಡೇನಿಯಲ್ ವೆಟೋರಿ, ಬಾಂಗ್ಲಾದೇಶದ ಕವರ್‌ನಲ್ಲಿ ಶಕೀಬ್ ಅಲ್ ಹಸನ್, ಆಸ್ಟ್ರೇಲಿಯಾಕ್ಕೆ ಮೀಸಲಿದ್ದ ಲಕೋಟೆಯಲ್ಲಿ ರಿಕಿ ಪಾಂಟಿಂಗ್ ಚಿತ್ರದ ಅಂಚೆಚೀಟಿಗಳಿದ್ದವು.

ನ್ಯೂಜಿಲೆಂಡ್‌ನ ಅಂಚೆ 2015ರ ವಿಶ್ವಕಪ್‌ಗೆ ಪೂರ್ವಭಾವಿಯಾಗಿ ಹೊರತಂದ ಅಂಚೆ ಪರಿಕರ ವಿಶೇಷವಾದುದು. ವಿಶೇಷ ಎಂದರೆ ಇದು ಸ್ಟ್ಯಾಂಪ್ ರೀತಿಯಿರಲಿಲ್ಲ. ಇದರಲ್ಲಿ 14 ಚೆಂಡುಗಳ ಚಿತ್ರಗಳಿದ್ದು, ಒಂದೊಂದರಲ್ಲಿ ಭಾಗವಹಿಸುವ ತಂಡಗಳ ಧ್ವಜಗಳನ್ನು ಹೊಂದಿದ್ದವು. ‘14 ಟೀಮ್ಸ್, 1 ಚಾಂಪಿಯನ್’ ಎಂಬ ಶೀರ್ಷಿಕೆಯನ್ನೂ ಇದು ಹೊಂದಿತ್ತು.

ವಿವಿಧ ವಿಶ್ವಕಪ್ ಸಂದರ್ಭಗಳಲ್ಲಿ ಕ್ರಿಕೆಟ್ ಆಡುವ ದೇಶಗಳು ಅಂಚೆಚೀಟಿಗಳನ್ನು ಹೊರತಂದಿವೆ. ಭಾರತದಲ್ಲಿ ಕ್ರಿಕೆಟ್ ಅತ್ಯಂತ ಜನಪ್ರಿಯ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ವಿಶ್ವದಲ್ಲೇ ಶ್ರೀಮಂತ ಸಂಸ್ಥೆಯಾಗಿ ರೂಪುಗೊಂಡು ಹಲವು ವರ್ಷಗಳೇ ಕಳೆದಿವೆ. ಆದರೆ ವಿಶ್ವಕಪ್ ಸೇರಿ ಕ್ರಿಕೆಟ್‌ಗೆ ಸಂಬಂಧಿಸಿದ ಅಂಚೆಚೀಟಿಗಳು ಭಾರತದಲ್ಲಿ ಬಿಡುಗಡೆಯಾಗಿರುವುದು ಬೆರಳೆಣಿಕೆಯಷ್ಟು. ಅವು ಎರಡಂಕಿಯನ್ನೂ ದಾಟಿಲ್ಲ.

ಲೇಖಕರು ಅಂಚೆಚೀಟಿಗಳ ಸಂಗ್ರಹಕಾರರು